ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1312

ಸದಸ್ಯರ ಹೆಸರು : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 24.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಉಡುಪಿ ಜಿಲ್ಲೆಯ ಹೃದಯ ಭಾಗದಲ್ಲಿರುವ ರಾಜ್ಯ ರಸ್ತೆ ಸಾರಿಗೆ ನಿಗಮದ ಸಿಟಿ ಬಸ್ ನಿಲ್ದಾಣಕ್ಕೆ ತಗುಲಿದ ವೆಚ್ಚವೆಷ್ಟು; ಈ ಕಟ್ಟಡದಲ್ಲಿರುವ ವಾಣಿಜ್ಯ ಕೊಠಡಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಮತ್ತು ಬಾಡಿಗೆ ಪಡೆದಿರುವ ಕೊಠಡಿಗಳ ಸಂಖ್ಯೆ ಎಷ್ಟು; ವಾರ್ಷಿಕ ಬಾಡಿಗೆ ಮೊತ್ತವೆಷ್ಟು; ಈ ಕಟ್ಟಡದ ನಿರ್ಮಾಣದ ಗುತ್ತಿಗೆ ಪಡೆದ ಗುತ್ತಿಗೆದಾರರ ಹೆಸರು ಮತ್ತು ವಿಳಾಸ ಯಾವುದು; (ಕೊಠಡಿವಾರು ಮಾಹಿತಿಯನ್ನು ನೀಡುವುದು)	ಉಡುಪಿ ಜಿಲ್ಲೆಯ ಕ.ರಾ.ರ.ಸಾ.ನಿಗಮದ ನಗರ ಸಾರಿಗೆ ಬಸ್ ನಿಲ್ದಾಣವನ್ನು ರೂ.393.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಉಡುಪಿ ನಗರದಲ್ಲಿನ ಸಿಟಿ ಬಸ್ಸು ನಿಲ್ದಾಣದಲ್ಲಿರುವ ಒಟ್ಟು ವಾಣಿಜ್ಯ ಕೊಠಡಿಗಳ ಸಂಖ್ಯೆ-15. ಇದರಲ್ಲಿ 13 ಕೊಠಡಿಗಳನ್ನು ಬಾಡಿಗೆಗೆ ಪಡೆಯಲಾಗಿದೆ ಹಾಗೂ 02 ಕೊಠಡಿಗಳು ಖಾಲಿ ಇರುತ್ತವೆ. ಸದರಿ ಬಸ್ ನಿಲ್ದಾಣದಲ್ಲಿ ವಾಣಿಜ್ಯ ಮಳಿಗೆಗಳನ್ನು ಪರವಾನಿಗೆ ನೀಡಿರುವ ಕೊಠಡಿವಾರು ಮಾಹಿತಿಯನ್ನು ಅನುಬಂಧ-ಅ ನಲ್ಲಿ ನೀಡಲಾಗಿದೆ. ಈ ಕಟ್ಟಡದ ನಿರ್ಮಾಣದ ಗುತ್ತಿಗೆ ಪಡೆದ ಗುತ್ತಿಗೆದಾರರ ಹೆಸರು ಮತ್ತು ವಿಳಾಸ: ಶ್ರೀ ಉದಯ್‌ಶೆಟ್ಟಿ, 'ದೇವಿಪ್ರಸಾದ್' ಗಾಂಧಿ ಮೈದಾನ ಮುನಿಯಾಲು (ಪೋಸ್ಟ್) ಕಾರ್ಕಳ (ತಾ), ಉಡುಪಿ (ಜಿಲ್ಲೆ).
ಆ.	ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿದ್ದ ನರ್ಮ್ ಬಸ್‌ಗಳ ಸಂಖ್ಯೆ ಎಷ್ಟು; ಕೋವಿಡ್ ಪ್ರಥಮ ಲಾಕ್‌ಡೌನ್ ಪೂರ್ವದಲ್ಲಿ ಅವುಗಳು ಸಂಚರಿಸುತ್ತಿದ್ದ ಮಾರ್ಗಗಳು ಯಾವುವು; ಪ್ರಸ್ತುತ ಸಂಚರಿಸುತ್ತಿರುವ ಮಾರ್ಗಗಳು ಮತ್ತು ಟ್ರಿಪ್‌ಗಳ ಸಂಖ್ಯೆ ಎಷ್ಟು; (ಬಸ್‌ವಾರು, ಟ್ರಿಪ್‌ವಾರು ಮಾಹಿತಿ ನೀಡುವುದು)	ಉಡುಪಿ ಜಿಲ್ಲೆಗೆ 30 ನರ್ಮ್ ಬಸ್ಸುಗಳು ಮಂಜೂರಾಗಿರುತ್ತವೆ. ಕೋವಿಡ್-19 ಪೂರ್ವದಲ್ಲಿ 22 ಅನುಸೂಚೆಗಳಿಂದ 251 ಸುತ್ತುವಳಿಗಳಲ್ಲಿ ವಿವಿಧ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ವಿವರಗಳನ್ನು ಅನುಬಂಧ-ಆ ನಲ್ಲಿ ನೀಡಲಾಗಿದೆ. ಕೋವಿಡ್-19ರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದ್ದು, ಲಾಕ್‌ಡೌನ್ ತೆರವುಗೊಂಡ ನಂತರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಪುನರಾರಂಭಿಸಲಾಗುತ್ತಿದೆ. ಪ್ರಸ್ತುತ 15 ಅನುಸೂಚೆಗಳಿಂದ 157

		ಸುತ್ತುವಳಿಗಳಲ್ಲಿ ವಿವಿಧ ಮಾರ್ಗಗಳಲ್ಲಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ವಿವರಗಳನ್ನು ಅನುಬಂಧ-ಇ ನಲ್ಲಿ ನೀಡಲಾಗಿದೆ. ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯ ಅವಶ್ಯಕತೆಗೆ ಅನುಗುಣವಾಗಿದೆ.
ಇ.	ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿದ್ದ ನರ್ಮ್ ಬಸ್ ಗಳನ್ನು ಬೇರೆ ಜಿಲ್ಲೆಗಳಿಗೆ ವರ್ಗಾಯಿಸಲಾಗಿದೆಯೇ; ಎಷ್ಟು ಬಸ್‌ಗಳನ್ನು ಯಾವ ಜಿಲ್ಲೆಗೆ ವರ್ಗಾಯಿಸಲಾಗಿದೆ; ಯಾವ ಕಾರಣಕ್ಕಾಗಿ ವರ್ಗಾಯಿಸಲಾಗಿದೆ;	ಕ.ರಾ.ರ.ಸಾ.ನಿಗಮದ ಮಂಗಳೂರು ವಿಭಾಗದ ಉಡುಪಿ ಘಟಕಕ್ಕೆ ಮಂಜೂರಾಗಿದ್ದ ನರ್ಮ್ ಬಸ್ಸುಗಳನ್ನು ಬೇರೆ ಜಿಲ್ಲೆಗಳಿಗೆ ವರ್ಗಾಯಿಸಿರುವುದಿಲ್ಲ. ಮಂಜೂರಾಗಿದ್ದ 30 ನರ್ಮ್ ಬಸ್ಸುಗಳನ್ನು ಹೊರತುಪಡಿಸಿ, ಹೆಚ್ಚುವರಿಯಾಗಿದ್ದ 3 ಮಿಡಿ ವಾಹನಗಳನ್ನು ಹಾಸನ ವಿಭಾಗಕ್ಕೆ ವರ್ಗಾಯಿಸಲಾಗಿರುತ್ತದೆ.
ಈ.	ಜನನಿಬಿಡ ಪ್ರದೇಶದಲ್ಲಿ ಖಾಸಗಿ ಬಸ್‌ಗಳು ಪ್ರತಿನಿತ್ಯ ಸಂಚರಿಸುವ ಮಾರ್ಗದಲ್ಲಿಯೇ ನರ್ಮ್ ಬಸ್‌ಗಳು ನಷ್ಟವನ್ನು ಹೊಂದಲು ಕಾರಣವಾಗಿದೆಯೇ; ಜನರ ಬೇಡಿಕೆಯನ್ನು ಹೊಂದಿದ್ದರೂ ನರ್ಮ್ ಬಸ್‌ಗಳು ಸಂಚಾರವನ್ನು ನಿಲ್ಲಿಸಲು ಕಾರಣವೇನು?	ನಿಗಮದ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ಖಾಸಗಿ ಬಸ್‌ಗಳು ಸಂಚರಿಸುವ ಮಾರ್ಗಗಳು ಮತ್ತು ಇತರೇ ಮಾರ್ಗಗಳಲ್ಲಿ ಆಚರಣೆ ಮಾಡುತ್ತಿರುವ ನರ್ಮ್ ನಗರ ಸಾರಿಗೆಗಳನ್ನು ನಷ್ಟದಲ್ಲಿ ಆಚರಣೆ ಮಾಡಲಾಗುತ್ತಿದೆ. ಕೋವಿಡ್-19ರ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿತ್ತು. ಲಾಕ್‌ಡೌನ್ ತೆರವುಗೊಂಡ ನಂತರ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಹೆಚ್ಚಿಸಿ ಆಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯ ಅವಶ್ಯಕತೆಗೆ ಅನುಗುಣವಾಗಿದೆ.

ಸಂಖ್ಯೆ: ಟಿಡಿ 306 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

L6

ಚುಕ್ಕೆ ಗುರುತಿಲ್ಲದ ಪ್ರ.ಸಂ:1312ಕ್ಕೆ ಅನುಬಂಧ- "ಅ"

ಉಡುಪಿ ನಗರ ಬಸ್ಸುನಿಲ್ದಾಣದಲ್ಲಿರುವ ವಾಣಿಜ್ಯ ಮಳಿಗೆಗಳ ಆದಾಯ ವಿವರಗಳು:
(ದಿನಾಂಕ: 13.12.2021 ರಂತೆ)

ಕ್ರ.ಸಂ	ಮಳಿಗೆಗಳ ವಿವರ	ಪರವಾನಿಗೆ ದಾರರ ವಿವರ	ಕರಾರು ಒಪ್ಪಂದದ ಅವಧಿ		ವಿಸ್ತೀರ್ಣ (ಚ.ಅಡಿ)	ಪ್ರಸ್ತುತ ಮಾಸಿಕ ಪರವಾನಿಗೆ ಶುಲ್ಕ	ವಾರ್ಷಿಕ ಪರವಾನಿಗೆ ಶುಲ್ಕ
1	ಜನರಲ್ ಸ್ಟಾಲ್, ಮಳಿಗೆ ಸಂ: 01 ಮತ್ತು 02	ಖಾಲಿ ಇದೆ	01.10.2020	30.09.2025	101.18	ದಿನಾಂಕ 05.10.2021	
2			09.02.2021	08.02.2026	62.11	ದಿನಾಂಕ 10.12.2021	
3	ಜನರಲ್ ಸ್ಟಾಲ್, ಮಳಿಗೆ ಸಂ: 03	ಹರೀಶ್ ನಾಯ್ಕ್	01.10.2020	30.09.2025	62.22	11000	132000
4	ಜನರಲ್ ಸ್ಟಾಲ್, ಮಳಿಗೆ ಸಂ: 04	ರಾಜೇಶ್ ಮೊಬೆಯಿಸ್	01.10.2020	30.09.2025	245.31	35035	420420
5	ಜನರಲ್ ಸ್ಟಾಲ್, ಮಳಿಗೆ ಸಂ: 05	ಪ್ರಶಾಂತ್	01.10.2020	30.09.2025	245.31	38609	463308
6	ಜನರಲ್ ಸ್ಟಾಲ್, ಮಳಿಗೆ ಸಂ: 06	ದಿವಾಕರ್ ಸನಿಲ್	01.10.2020	30.09.2025	188.26	30250	363000
7	ಜನರಲ್ ಸ್ಟಾಲ್, ಮಳಿಗೆ ಸಂ: 07	ದಿವಾಕರ್ ಸನಿಲ್	01.10.2020	30.09.2025	182.56	31350	376200
8	ಜನರಲ್ ಸ್ಟಾಲ್, ಮಳಿಗೆ ಸಂ: 08	ಶಶಿಕಾಂತ್.ಡಿ	01.10.2020	30.09.2025	182.56	22122	265464
9	ಜನರಲ್ ಸ್ಟಾಲ್, ಮಳಿಗೆ ಸಂ: 09	ದಿವಾಕರ್ ಸನಿಲ್	01.10.2020	30.09.2025	286.97	32450	389400
10	ಜನರಲ್ ಸ್ಟಾಲ್, ಮಳಿಗೆ ಸಂ: 10	ದಿವಾಕರ್ ಸನಿಲ್	01.10.2020	30.09.2025	293.64	18926	227112
11	ಜನರಲ್ ಸ್ಟಾಲ್, ಮಳಿಗೆ ಸಂ: 11	ವಸಂತ.ಕೆ	01.10.2020	30.09.2025	286.97	18150	217800
12	ಜನರಲ್ ಸ್ಟಾಲ್, ಮಳಿಗೆ ಸಂ: 12	ನಾರಾಯಣ. ದೇವಪ್ಪ	01.10.2020	30.09.2025	116.79	5638	67656
13	ಮಳಿಗೆ ಸಂಖ್ಯೆ:13 ಉಪಹಾರ ಗೃಹ (ಸಸ್ಯಾಹಾರಿ)	ದಿವಾಕರ್ ಸನಿಲ್	01.03.2021	28.02.2026	987.7	63000	756000
14	ಮಳಿಗೆ ಸಂಖ್ಯೆ:14 ಉಪಹಾರ ದರ್ಶಿನಿ (ಸಸ್ಯಾಹಾರಿ)	ದಿವಾಕರ್ ಸನಿಲ್	24.03.2021	23.03.2026	361.67	38000	456000
15	ಮಳಿಗೆ ಸಂಖ್ಯೆ:15 (ಯಾತ್ರಿ ನಿವಾಸ/ ಹ್ಯಾಂಡಿಕ್ರಾಫ್ಟ್ ಮಳಿಗೆ)	ದಿವಾಕರ್ ಸನಿಲ್	01.10.2020	30.09.2030	5856.58	111222	1334664

ವ್ಯವಸ್ಥಾಪಕ ನಿರ್ದೇಶಕರು
ಕರಾರಸಾನಿಗಮ